**ಅ. ದಾ. ಸಂ. : 83 / 2016**
**ಡಿ.ಡಬ್ಲ್ಯೂ : 01**

**ದಿನಾಂಕ : 28-01-2020** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ವಾದಿಯ** ಪರ **ಶ್ರೀ. ಎಸ್.ಎಸ್.ಎಂ.** ವಕೀಲರಿಂದ :-

ಭೈರಣ್ಣನವರು ತಮ್ಮ ಜೀವಂತವಿದ್ದ ಕಾಲದಲ್ಲಿ ದಾವ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದು, ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ. ನಿಮ್ಮ ತಾತ ಭೈರಣ್ಣನವರಿಗೆ 3 ಜನ ಮಕ್ಕಳುಗಳು, ಅವರುಗಳೆಂದರೆ ಭೈರಣ್ಣ, ಲಿಂಗಪ್ಪ ಮತ್ತು ಕಾಳಪ್ಪ ಎಂದರೆ ಸರಿ. ನಿಮ್ಮ ತಾತ ಭೈರಣ್ಣನವರು ಮರಣ ಹೊಂದಿದ ನಂತರ ಅವರ ಮಕ್ಕಳುಗಳು ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ. ನಿಮ್ಮ ತಾತ ಭೈರಣ್ಣನವರು ಮರಣ ಹೊಂದಿದ ನಂತರ ನಿಮ್ಮ ತಂದೆಯ ಪರವಾಗಿ ನೀವು, ಲಿಂಗಪ್ಪ ಹಾಗೂ ಕಾಳಪ್ಪನವರ ಪರವಾಗಿ ಅವರ ಮಗ ಭೈರಪ್ಪನವರು ಭೂನ್ಯಾಯ ಮಂಡಳಿಯಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ನಿಪಿ-01 ಈ ಮೇಲೆ ಹೇಳಿದಂತೆ ಭೂ ನ್ಯಾಯ ಮಂಡಳಿಗೆ ಸಲ್ಲಿಸಿದ ಅರ್ಜಿ ಆಗಿರುತ್ತದೆಂದರೆ ಸರಿ.

2. ನೀವು ಸದರಿ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಖಾತೆ ಮತ್ತು ಪಹಣಿಗಳು ಭೈರಣ್ಣನವರ ಹೆಸರಿನಲ್ಲಿರುತ್ತದೆಂದು ನಮೂದು ಮಾಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಸದರಿ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಖಾತೆ ಮತ್ತು ಪಹಣಿಗಳು ಭೈರಣ್ಣನವರ ಹೆಸರಿನಲ್ಲಿರುತ್ತದೆಂದು ನಮೂದು ಮಾಡಿದ್ದರು ಸಹ ನಮೂದು ಮಾಡಿರುವುದಿಲ್ಲವೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಭೂ ನ್ಯಾಯ ಮಂಡಳಿಯಲ್ಲಿ ನೀವು ಹೇಳಿಕೆ ನೀಡಿರುತ್ತೀರಿ ಎಂದರೆ ಸರಿ. ನಿಪಿ-03 ರ ರೀತಿ ನಾನು ಹೇಳಿಕೆ ನೀಡಿರುತ್ತೇನೆಂದರೆ ಸರಿ. ನಿಪಿ-03 ನಿಮ್ಮ ಹೇಳಿಕೆಯಲ್ಲಿ ಸಿದ್ದಗಂಗಯ್ಯ, ರೇವಣಸಿದ್ದಯ್ಯ, ಮಹದೇವಯ್ಯ ಮತ್ತು ಶಿವಣ್ಣ ಎನ್ನುವವರಿಗೆ 3 ನೇ ಒಂದು ಭಾಗದ ಹಕ್ಕಿದ್ದು, 4 ಜನ ಸಹೋದರರಿಗೆ ಸಂಬಂಧಿಸಿದಾಗಿ 4 ಜನರಿಗೂ ರೈತಾಪಿ ಹಕ್ಕು ಮಾಡಿಕೊಡಲು ಒಪ್ಪಿರುತ್ತೇವೆಂದು

ಹೇಳಿಕೆ ನೀಡಿರುತ್ತೀರಿ ಎಂದರೆ ಸಾಕ್ಷಿ ನಾನು ಆ ರೀತಿ ಹೇಳಿಕೆ ನೀಡಿರುವುದಿಲ್ಲವೆಂದು ನುಡಿಯುತ್ತಾರೆ.

3. ನಿಮ್ಮ ಹೇಳಿಕೆಯ ಆಧಾರದ ಮೇಲೆ ಭೂ ನ್ಯಾಯಮಂಡಳಿಯವರು ನಿಮಗೆ ಮತ್ತು ನಿಮ್ಮ ಸಹೋದರರಿಗೆ 3 ನೇ ಒಂದು ಭಾಗದ ಹಕ್ಕನ್ನು ನೀಡಿ ಆದೇಶ ನೀಡಿರುತ್ತಾರೆಂದರೆ ಸಾಕ್ಷಿ ನನಗೆ ಮತ್ತು ನನ್ನ ಚಿಕ್ಕಪ್ಪಂದಿರಿಗೆ 3 ನೇ ಒಂದು ಭಾಗ ಹಂಚಿಕೊಳ್ಳಿ ಎಂದು ಆದೇಶವಾಗಿರುತ್ತದೆಂದು ನುಡಿಯುತ್ತಾರೆ. ಭೂ ನ್ಯಾಯ ಮಂಡಳಿಯವರು ಭೈರಣ್ಣನವರ ಮಕ್ಕಳಾದ ನಿಮಗೆ 3 ನೇ ಒಂದುಭಾಗ, ನಿಮ್ಮ ಚಿಕ್ಕಪ್ಪನಾದ ಲಿಂಗಪ್ಪನವರಿಗೆ 3 ನೇ ಒಂದು ಭಾಗ ಹಾಗೂ ಕಾಳಪ್ಪನವರಿಗೆ 3 ನೇ ಒಂದು ಭಾಗದ ರೀತಿ ಆದೇಶ ಮಾಡಲಾಗಿರುತ್ತದೆಂದರೆ ಸಾಕ್ಷಿ ನನಗೆ, ಲಿಂಗಪ್ಪ ಮತ್ತು ಕಾಳಪ್ಪನವರಿಗೆ ಒಟ್ಟಾಗಿ ಸೇರಿ 3 ನೇ ಒಂದು ಭಾಗ ಹಂಚಿಕೊಳ್ಳುವಂತೆ ಆದೇಶವಾಗಿರುತ್ತದೆಂದು ನುಡಿಯುತ್ತಾರೆ. ಭೂ ನ್ಯಾಯಮಂಡಳಿಯಿಂದ ಆದೇಶವಾಗಿರುವ ಜಮೀನು ನಿಮ್ಮ ಸ್ವಯಾರ್ಜಿತ ಸ್ವತ್ತು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ನಿಮ್ಮ ಸ್ವಂತ ಹಣದಿಂದ ಖರೀದಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಸರ್ಕಾರದಿಂದ ನೀಡಿದ ಜಮೀನು ಆಗಿರುತ್ತದೆಂದು ನುಡಿಯುತ್ತಾರೆ.

4. ಭೂ ನ್ಯಾಯಮಂಡಳಿ ಆದೇಶ ನೀಡುವ ಪೂರ್ವದಲ್ಲಿ ನಿಮ್ಮ ತಂದೆ ಭೈರಣ್ಣ, ಲಿಂಗಪ್ಪ ಮತ್ತು ಕಾಳಪ್ಪನವರ ಹೆಸರಿನಲ್ಲಿ ಖಾತೆ ಮತ್ತು ಕಂದಾಯ ದಾಖಲಾತಿಗಳು ದಾವ ಸ್ವತ್ತಿನ ಬಾಬ್ತು ಇತ್ತು ಎಂದರೆ ಸರಿಯಲ್ಲ. ಭೂ ನ್ಯಾಯ ಮಂಡಳಿ ಆದೇಶವಾದ ನಂತರ ಸದರಿ ಆದೇಶದನ್ವಯ ಯಾವ ದಿನಾಂಕದಂದು ಖಾತೆ ಕಂದಾಯ ದಾಖಲಾತಿಗಳನ್ನು ಮಾಡಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿ ದಿನಾಂಕ ನನಗೆ ನೆನಪಿರುವುದಿಲ್ಲವೆಂದು ನುಡಿಯುತ್ತಾರೆ. ದಾವ ಸ್ವತ್ತುಗಳು ನಿಮ್ಮ ಹೆಸರಿಗೆ ಯಾವ ವರ್ಷದಲ್ಲಿ ಕಂದಾಯ ದಾಖಲಾತಿಗಳು ಆಗಿರುತ್ತದೆಂದರೆ ಸಾಕ್ಷಿ ಭೂ ನ್ಯಾಯ ಮಂಡಳಿ ಆದೇಶ ನೀಡಿದ ದಿನದಿಂದ ನನ್ನ ಹೆಸರಿಗೆ ದಾಖಲಾತಿಗಳು ಆಗಿರುತ್ತದೆಂದು ನುಡಿಯುತ್ತಾರೆ. ಭೂ ನ್ಯಾಯ ಮಂಡಳಿ ಭೈರಣ್ಣನವರ

ವಾರಸುದಾರರಿಗೆ ನೀಡಿದ್ದು, ನಿಮ್ಮ ಒಬ್ಬರಿಗೆ ಆದೇಶವಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮಧ್ಯಾಹ್ನದ ಕಲಾಪದ ಸಮಯ ಮೀರಿದ್ದರಿಂದ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಯ ಪರ ವಕೀಲರಿಗೆ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ಸಿ. ಜ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**